ಒ ಎಸ್ 250/2022 ಡಿ.ಡಬ್ಲ್ಯೂ:1

ಇಂದು ದಿಃ 06.03.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಎನ್ ಯು ವಕೀಲರಿಂದಃ

ನನ್ನ ತಂದೆ ತಾಯಿಯ ಮುಖ್ಯ ಕಸುಬು ವ್ಯವಸಾಯ. ನಮ್ಮ ತಂದೆಯ ತಂದೆ ಚಕ್ರ ಇನಾಮ್ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಐಟಂ 1 ರಲ್ಲಿ ಒಟ್ಟು 5 ಎಕರೆ 19 ಗುಂಟೆ ಜಮೀನು ಇದೆ ಎಂದರೆ ಸರಿ. ಈ ಆಸ್ತಿಯ ಚಕ್ರ ಇನಾಮ್ ಆಸ್ತಿ ಎಂದರೆ ಸರಿ. ನಮ್ಮ ತಾತ ಮಲಿಯಯ್ಯ ಇವರಿಗ ದೊಡ್ಡನಂಜಯ್ಯ ಮತ್ತು ಚಿಕ್ಕ ನಂಜಯ್ಯ ಎಂಬ ಇಬ್ಬರು ಸಹೋದರರು ಎಂದರೆ ಸರಿಯಲ್ಲ. ನನ್ನ ತಾತನ ಹೆಸರು ಮಲಿಯ್ಯಯ್ಯ ಎಂದರೆ ಸರಿ. ನನ್ನ ಅಜ್ಜಿ ಗೆ ಸರ್ಕಾರದಿಂದ ಆಸ್ತಿ ಮಂಜೂರಾಗಿತ್ತು ಎಂದು ನಾನು ಹೇಳುತ್ತಿದ್ದೇನು. ನನ್ನ ಅಜ್ಜಿ ವ್ಯವಸಾಯ ಮಾಡುತ್ತಿದ್ದರು. ನನ್ನ ತಾತ ಯಾವಾಗ ಮೃತಪಟ್ಟರು ಗೊತ್ತಿಲ್ಲ. ನನ್ನ ತಾತ 1978 ರಲ್ಲಿ ಮೃತಪಟ್ಟರು ಎಂದರೆ ಸರಿಯಲ್ಲ. 1982 ರಲ್ಲಿ ನನ್ನ ಅಜ್ಜಿಗೆ ಆಸ್ತಿಯು ಪುನರ್ ಮಂಜೂರಾಯಿತು ಎಂದರೆ ಸರಿ. ಆಸ್ತಿ ಮರು ಮಂಜೂರಾತಿ ಆಗಬೇಕಾದರೆ ಆ ಮಾದಲೆ ಮಂಜೂರಾಗಿರಬೇಕು ಎಂಬ ವಿಷಯ ನನಗೆ ಗೊತ್ತಿಲ್ಲ. ನನ್ನ ತಾತನಿಗೆ 1970-71 ರಲ್ಲಿ ಮೂಲ ಮಂಜೂರಾತಿ ಆಗಿತ್ತು ಎಂದರೆ ಸರಿಯಲ್ಲ. ನನ್ನ ತಾತ 1978 ರಲ್ಲಿ ಮೃತಪಟ್ಟ ನಂತರ ನನ್ನ ಅಜ್ಜಿಗೆ 1982 ರಲ್ಲಿ ಮರು ಮಂಜೂರಾಯಿತು ಎಂದರೆ ಸರಿಯಲ್ಲ. ನನ್ನ ಅಜ್ಜಿಗೆ ಸರ್ಕಾರದಿಂದ ಆಸ್ತಿ ಮಂಜೂರಾದ ಕಾರಣ ಯಾವುದೇ ಪತ್ರವನ್ನು ಬರೆಯುವ ಸ್ವತಂತ್ರ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

ಎರಡನೇ ಐಟಂ ಆಸ್ತಿಯು ನನ್ನ ತಾತ ಮುತ್ತಾತ ವಾಸ ಮಾಡುತ್ತಿದ್ದ ಮನೆ ಎಂದರೆ ಸರಿಯಲ್ಲ. ನನ್ನ ತಾತ ಮುತ್ತಾತ ರವರ ಖಾಯಂ ವಿಳಾಸ ಕವಲಂದೆ ಎಂದರೆ ಸರಿ ಆದರೆ 2ನೇ ಐಟಂ ಆಸ್ತಿಯು ನನಗೆ ತಾತ ಮುತ್ತಾತ ವಾಸ ಮಾಡುತ್ತಿದ್ದ ಮನೆ ಅಲ್ಲ. ಸದರಿ ಮನೆಯನ್ನು ನಾನು ಕಟ್ಟಿಕೊಂಡಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ. ನಿಪಿ .9 ರಲ್ಲಿ ಬರೆದಿರುವ ವಿವರಗಳು ಸರಿ. ನಮ್ಮ ತಂದೆ ತಾಯಿಗೆ ನಾನೆ ವಿದ್ಯಾವಂತ ಪುರುಷ ಸದಸ್ಯ ಎಂದರೆ ಸರಿ. ಉಳಿದ ಸೋದರ ಸಹೋದರಿಯರು ನನಗಿಂತ ಚಿಕ್ಕವರು . ನನ್ನ ತಂದೆಗೆ ನಾನೆ ದೊಡ್ಡ ಮಗ. ನನ್ನ ತಂದೆ ಹೆಚ್ಚಾಗಿ ಓದಿರಲಿಲ್ಲ ಅಂದರೆ 5ನೇ ತರಗತಿ ಓದಿದ್ದರು. ಆ ಸಮಯದಲ್ಲಿ ನನ್ನ ತಂದೆಯ ಅವಿದ್ಯಾವಂತಿಕೆಯನ್ನು ದುರುಪಯೋಗ ಮಾಡಿಕೊಂಡು ವಾದಿಗೆ ಪಾಲು ಕೊಡುತ್ತಿಲ್ಲ ಎಂದರೆ ಸರಿಯಲ್ಲ.

ನನ್ನ ಅಜ್ಜಿ ಯಾವುದೇ ವಿಲ್ ನಾಮೆ ಬರೆಯಲು ಅಗತ್ಯವಿರಲಿಲ್ಲ ಎಂದರೆ ಸರಿಯಲ್ಲ. ಸದರಿ ವಿಲ್ ನಾಮೆಯು ನಾನು ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ. ನನ್ನ ತಂದೆ ಮೃತಪಟ್ಟ ನಂತರ ಖಾತೆ ಆಗಿದೆ ಅದು ನನ್ನ ಸ್ವಯಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದ 11ನೇ ಪ್ಯಾರದಲ್ಲಿ

ತೋರಿಸಿರುವ ಸರ್ವೆ ನಂಬರ್ 278/3 ರ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ವಿಭಾಗ ಕ ಕೊಡಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಕ್ರ ಇನಾಮ್ ಆಸ್ತಿ ಆಗಿದ್ದರೂ ಸಹ ನನ್ನ ಅಜ್ಜಿ ವಿಲ್ ನಾಮೆ ಬರೆದಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.